ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಬುಧವಾರ, ೧೪, ಜನವರಿ, ೨೦೨೬(ಪುಷ್ಯ, ೨೪, ಶಕವರ್ಷ, ೧೯೪೭)	ಸಂಚಿಕೆ ೧೦
Volume - 161	BENGALURU, WEDNESDAY, 14, JANUARY, 2026(PUSHYA , 24, SHAKAVARSHA, 1947)	Issue 10

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 9 ಪಿಆರ್ ಜೆ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:24-12-2025.

ಅಧಿಸೂಚನೆ

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022ರ ಸೆಕ್ಷನ್ 3(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರದ ಪ್ರಾದೇಶಿಕ ಪರಿಮಿತಿಯನ್ನು ಬೆಂಗಳೂರು ನಗರ ಜಿಲ್ಲೆಯ ಪ್ರದೇಶಕ್ಕೆ ಸೀಮಿತಗೊಳಿಸಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಹೊರಡಿಸಿರುವ ನಕ್ಷೆಯ ಆಧಾರದ ಮೇಲೆ ಲಗತ್ತಿಸಿರುವ ನಕ್ಷೆಯಂತೆ ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರದ ಪ್ರದೇಶ ಪರಿಮಿತಿಯೆಂದು ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಜು ಪಿ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಯೋಜನೆ)

ಅಧಿಸೂಚನೆ ಸಂಖ್ಯೆ ನಅಇ 9 ಪಿಆರ್‌ಜೆ 2025, ದಿನಾಂಕ: 24-12-2025ಕ್ಕೆ ಲಗತ್ತಿಸಲಾದ ಅನುಬಂಧ

ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರದ ಪರಿಮಿತಿ ಪ್ರದೇಶ



PR-14

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 651 ಬೆಂಆಸೇ 2025(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, 4ನೇ ಮಹಡಿ,
ಡಾ|| ಬಿ.ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 08.01.2026.

ಅಧಿಸೂಚನೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1976ರ ಕಲಂ 30(1) ರಡಿ ಪ್ರದತ್ತವಾದ ಅಧಿಕಾರದ ಅಡಿಯಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ ಈ ಕೆಳಕಂಡ ಬಡಾವಣೆಗಳನ್ನು ಮುಂದಿನ ನಿರ್ವಹಣೆಗಾಗಿ ಯಥಾಸ್ಥಿತಿ (as-is where is basis)ಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಸಂಬಂಧಪಟ್ಟ ನಗರಪಾಲಿಕೆಗಳಿಗೆ ಹಸ್ತಾಂತರಿಸಿ ಆದೇಶಿಸಿದೆ.

ಕ್ರ. ಸಂ	ಬಡಾವಣೆಯ ಹೆಸರು
1.	ಬನಶಂಕರಿ 6ನೇ ಹಂತ, 1 ರಿಂದ 11ನೇ ಬ್ಲಾಕ್
2.	ಬನಶಂಕರಿ 6ನೇ ಹಂತ ಮುಂದುವರೆದ ಬಡಾವಣೆ 4th 'H', 'B', 'T' block
3.	ಜಯಪ್ರಕಾಶ್ ನಾರಾಯಣ ನಗರ (ಜೆಪಿ ನಗರ), 9ನೇ ಫೇಸ್
	ಜಯಪ್ರಕಾಶ್ ನಾರಾಯಣ ನಗರ(ಜೆಪಿ ನಗರ) 8ನೇ ಫೇಸ್
5.	ಅಂಜನಾಪುರ ಟೌನ್ ಶಿಪ್ ಬಡಾವಣೆ
6.	ಅಂಜನಾಪುರ ಮುಂದುವರೆದ ಬಡಾವಣೆ
7.	ಸರ್.ಎಂ ವಿಶ್ವೇಶ್ವರಯ್ಯ ಬಡಾವಣೆ, 1 ರಿಂದ 6 ನೇ ಬ್ಲಾಕ್
8.	ಸರ್.ಎಂ ವಿಶ್ವೇಶ್ವರಯ್ಯ ಮುಂದುವರೆದ ಬಡಾವಣೆ, 7 ರಿಂದ 9ನೇ ಬ್ಲಾಕ್

ಷರತ್ತುಗಳು:-

1. ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರಚಿಸಿ ಅಭಿವೃದ್ಧಿಪಡಿಸಿರುವ ಮೇಲ್ಕಂಡ ಬಡಾವಣೆಗಳನ್ನು ಕೂಡಲೇ ಸಂಬಂಧಪಟ್ಟ ನಗರ ಪಾಲಿಕೆಗಳಿಗೆ ಹಸ್ತಾಂತರಿಸತಕ್ಕದ್ದು.
2. ಸದರಿ ಬಡಾವಣೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಸಂಬಂಧಪಟ್ಟ ನಗರ ಪಾಲಿಕೆ ಅಧಿಕಾರಿಗಳು ಜಂಟಿಯಾಗಿ ಪರಿವೀಕ್ಷಣೆ ನಡೆಸಿ, ಸಹಿ ಮಾಡತಕ್ಕದ್ದು.
3. ಹಸ್ತಾಂತರಿಸುವಾಗ ಬಡಾವಣೆಯಲ್ಲಿನ ರಸ್ತೆ, ಉದ್ಯಾನವನ ಒಳಗೊಂಡಂತೆ ಎಲ್ಲಾ ಮೂಲಭೂತ ಸೌಕರ್ಯಗಳು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದದೇ ಇದ್ದಲ್ಲಿ, ಇದಕ್ಕೆ ತಗಲುವ ವೆಚ್ಚದ ಶೇಕಡ 50 ರಷ್ಟು ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಗರ ಪಾಲಿಕೆಗಳಿಗೆ ಸಂದಾಯ ಮಾಡತಕ್ಕದ್ದು.
4. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿಗೆ ಸಂಬಂಧಿಸಿದಂತೆ, ಮೂಲಭೂತ ಸೌಕರ್ಯ ಕೊರತೆಯಿದ್ದಲ್ಲಿ, ಇದನ್ನು ಒದಗಿಸಲು ತಗಲುವ ವೆಚ್ಚದ ಶೇ.50 ರಷ್ಟು ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹಾಗೂ ಶೇ.50 ರಷ್ಟು ಮೊತ್ತವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಭರಿಸಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಮೂಲಭೂತ ಸೌಕರ್ಯ ಒದಗಿಸತಕ್ಕದ್ದು.
5. ಮೂಲಭೂತ ಸೌಕರ್ಯಕ್ಕಾಗಿ ಜಮಾ ಮಾಡಿರುವ ಹಣವನ್ನು ಇತರೆ ಯಾವುದೇ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ. ಬಿಡಿಎ ವತಿಯಿಂದ ಜಮಾ ಮಾಡಿರುವ ಶೇ.50 ರಷ್ಟು ಮೊತ್ತದ ಜೊತೆಗೆ ಸಂಬಂಧಪಟ್ಟ ನಗರ ಪಾಲಿಕೆಗಳು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ

ಮಂಡಳಿಯು ಶೇ.50 ರಷ್ಟು ಮೊತ್ತವನ್ನು ಅನುದಾನ ಇಟ್ಟು ESCROW ಮುಖಾಂತರ ಕೆಲಸಗಳನ್ನು ಕೈಗೊಳ್ಳತಕ್ಕದ್ದು.

6. ಸಂಬಂಧಪಟ್ಟ ನಗರ ಪಾಲಿಕೆಗಳು ಬಡಾವಣೆಗಳನ್ನು ಹಸ್ತಾಂತರಿಸಿಕೊಂಡ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು ಹಾಗೂ ಹಸ್ತಾಂತರಿಸಿಕೊಳ್ಳಲಾಗಿರುವ ಉದ್ಯಾನವನ, ಬಯಲು ಜಾಗ ಹಾಗೂ ಆಟದ ಮೈದಾನದ ಪ್ರದೇಶಗಳನ್ನು "The Karnataka Parks, Play Fields and Open Spaces (Preservation and Regulation) Act, 1985 ರನ್ವಯ ನಿಯಮಾನುಸಾರ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು.
7. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸದರಿ ಬಡಾವಣೆಗಳಲ್ಲಿನ ನಿವೇಶನ/ಮನೆಗಳಿಗೆ ನೀಡಲಾಗಿರುವ ಖಾತೆಗಳನ್ನು ಸಂಬಂಧಪಟ್ಟ ನಗರ ಪಾಲಿಕೆಗಳಿಗೆ ಕೂಡಲೇ ಹಸ್ತಾಂತರಿಸತಕ್ಕದ್ದು.
8. ಸದರಿ ಬಡಾವಣೆಗಳಿಗೆ ಸಂಬಂಧಿಸಿದಂತೆ ಎಲ್ಲಾ ತೆರಿಗೆಗಳು ಹಾಗೂ ಬಾಕಿ ಇರುವ ಎಲ್ಲಾ ತೆರಿಗೆಗಳನ್ನು ಸಂಬಂಧಪಟ್ಟ ನಗರ ಪಾಲಿಕೆಗಳು ಸಂಗ್ರಹಿಸತಕ್ಕದ್ದು.
9. ಈ ಬಡಾವಣೆಗಳಲ್ಲಿ ಕಾಯ್ದಿರಿಸಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಲೀಕತ್ವದಲ್ಲಿ ಉಳಿಸಿಕೊಂಡು ನಿಯಮಾನುಸಾರ ನಿರ್ವಹಿಸತಕ್ಕದ್ದು.
10. ಭೂಮಾಲೀಕತ್ವದ ಬಗ್ಗೆ ವಿವಾದಗಳು ಇರುವ ಪ್ರದೇಶಗಳನ್ನು ಹಸ್ತಾಂತರ ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೇಶ್ ಎಸ್ ಸೂಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಬಿಡಿಎ & ಬೆಂ-1)

PR-15

Government Of Karnataka

No: HFW 567 CGE 2024

Karnataka Government Secretariat,
Vikasa Soudha,
Dr|| B.R. Ambedkar Veedhi,
Bengaluru, dated: 13.08.2025.

NOTIFICATION

In exercise of the Powers conferred under sub-section (2) of section 1 of the Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) (Karnataka Amendment) Act, 2024 (Karnataka Act No. 41 of 2025), the Government of Karnataka hereby appoints the 15th day of August 2025 as the date on which the said Act shall come into force.

By Order and in the name of the
Governor of Karnataka,

(Padma V.)
Under Secretary To Government,
Health and Family Welfare Department
(Health 1 & 2).

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 567 ಸಿಜಿಇ 2024.

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 13.08.2025.

ಅಧಿಸೂಚನೆ

The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) (Karnataka Amendment) Act, 2024 (Karnataka Act No. 41 of 2025) ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮವು / ಅಧಿನಿಯಮದ ಪ್ರಕರಣದ ಉಪಬಂಧಗಳು ದಿನಾಂಕ 15.08.2025 ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮ ವಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 & 2).

PR-16

GOVERNMENT OF KARNATAKA

NO: LD 330 LET 2024

Karnataka Government Secretariat,
Vikasa Soudha,
Bangalore, dated:17/12/2025

NOTIFICATION

The draft of the following rules in amend the Karnataka Motor Transport and Other Allied Workers Social Security and Welfare Rules, 2024, which the Government of Karnataka proposes to make in exercise of the powers conferred by section 22 of the Karnataka Motor Transport and Other Allied Workers Social Security and Welfare Act, 2024 (Karnataka Act 13 of 2024) in hereby published as required by sub-section (1) of section 22 of the said Act, for the information of all the persons likely to be affected thereby and notice in hereby given that said draft will be taken into consideration after thirty days from the date of its publication in the official Gazette.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections or suggestions may be addressed to the Principal Secretary to Government, Labour Department, Room No. 414, 4th Floor, Vikasa Soudha, Dr. B.R.Ambedkar, Veedhi Bengaluru-560 001.

DRAFT RULES

1. **Title and commencement**. (1) These rules may be called the Karnataka Motor Transport and Other Allied Workers Social Security and Welfare (Amendment) Rules, 2025.

   (2) They shall come into force from the date of their final publication in the Official Gazette.

2. **Amendment of rule 14**. In the Karnataka Motor Transport and their Allied Workers' Social Security and Welfare Rules, 2024, in rule 14, in sub-rule (1), for the words, letter brackets and figures "The workers belonging the age group of 18 to 60 years and categories mentioned in clause (1) of section 2 of the Act", words, letters, brackets and figures "The workers belonging to the age group of 18 to 60 years and falling under the categories specified in clause (f) of section 2 of the Act, and for Private Commercial Transport drivers belonging to the age group of 18 to 70 years," shall be substituted.

By order and in the name of
Governor of Karnataka,

(**Praveena Kumara Hanni**)
Desk Officer-3,
Labour Department.

PR-17

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH